ಹಕ್ಕು ಸ್ಥಾಪನೆಯಿಂದ ಸ್ವಾಧೀನ ಮಾಡಿಕೊಂಡು ಅವಿಚ್ಛಿನ್ನವಾಗಿ ಸದರೀ ಪಂಜಾ ಕೂಡಿಸಲು ವಾದಿಗಳು ಅರುಹರೆಂತಲೂ ಮೇಲ್ಕಂಡ ವಾದಿಗಳು ಈ ಕೋರ್ಟಿನಲ್ಲಿ ದಾವೆ ಮಾಡಿಧಾರೆ.

ಈ ದಾವಾಕ್ಕೆ ಕಷ್ಟಿಗಾರರಾಗಿ ಕೇರಲಬೇಕ್ಷೆ ಇರುವ ದರೋಬಸ್ತು ಜನಗಳು ಈ ನೊಕದ್ದವು ಹಿಯರಿಂಗ್ ಯಿಟ್ಟು ಇರುವ 1896ನೇ ಇಸವಿ ಡಿಸೆಂಬರ್ 10ನೇ ತಾರೀಖು ದಿವಿ 11 ಘೆಂಟೆಗೆ ಮುದ್ದಗಿರಿ ಮೊಕ್ಕಾಂ ನಮ್ಮ ಕೋರ್ಟು ರೂಬರೂಬ್ ಹಾಜರಾಗ ತಕ್ಕದ್ದಿದೆ.

ತಾರೀಖು 13ನೇ ನವಂಬರ್ 1896ನೇ ಇಸವಿ.

ಡಿ. ಯಂ. ನರಸಿಂಗರಾವ್,
ಮುನ್ಸಿಫ್.

ಮೈಸೂರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಇಲಾಖಾ.

ಇಸ್ತಿಹಾರ್‌ನಾಮೆ.

ಸ್ಯ 1896ನೇ ಇಸವಿ ಅಕ್ಟೋಬರ್ ತಾರೀಖು 24ರಲ್ಲು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಗುಂಡ್ಲು ತಾಲ್ಲೂಕು ಬೆರಂಬಾಡಿ ಮತ್ತು ಬಂಡಿಪುರದ ಜಂಗಲ್ ಗಳಲ್ಲಿ ಪಣ ಚೌಬೀನೆಯನ್ನು ಖರೀದಿಗೆ ಪಡಿಯಲು ಇಷ್ಟವುಳ್ಳವರು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರಿಗೆ ಆಗಲಿ ಅಥವಾ ಗುಂಡ್ಲು ರೇಂಜಾಫಿಸರಿಗಾಗಲಿ ದರಖಾಸ್ತುಗಳನ್ನು ಕೊಡಬಹುದು.

2. ದರಖಾಸ್ತುದಾರ ಸದರೀ ಚೌಬೀನೆಯನ್ನು ಜಂಗಲ್‌ಗಳಲ್ಲಿ ತಯಾರು ಮಾಡಿಸಿ ಸಾಗಿಸಿಕೊಳ್ಳಬೇಕು. ಮತ್ತು ಈ ಭಾಗದಲ್ಲಿ ಜಾರಿಯಲ್ಲಿರುವ ರೂಲ್ಸ್‌ಗಳಿಗೆ ಬದ್ಧನಾಗಿರತಕ್ಕದ್ದು.

3. ಈ ಚೌಬೀನೆಗಳು ಮೈಸೂರು ಉಡ್ಡಿಯಾರ್ಡ್ ಮತ್ತು ಗುಂಡ್ಲು ಡಿಪೋ ದರಗಳಂತೆ ಆಯಾಯ ಜಂಗಲ್ ತಯಾರಿ ಮತ್ತು ಲದೈ ಖರ್ಚು ಜಾತಾ ಬೆಕರಿ ಮಾಡಲ್ಪಡುತ್ತವೆ.

4. ಖರೀದಿಗೆ ಪಡಿಯಲೂ ಇಷ್ಟವುಳ್ಳವರು ಈ ವಿಷಯವಾಗಿ ಜಾಸ್ತೀ ತಫ್ಸೀಲ್ ತಿಳಿಯಬೇಕೆಂದು ಕುತೂಹಲ ವಿದ್ದಲ್ಲಿ ಗುಂಡ್ಲು ರೇಂಜಾಫಿಸರಿಗೆ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಗೆ ಅರ್ಜಿ ಗುಜರಾಯಿಸಿ ಕೊಳ್ಳಬಹುದಾಗಿರುತ್ತೆ.

ಎಂ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ಶಿವಮೊಗ್ಗಾ ಡಿಸ್ಟ್ರಿಕ್ಟ್.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ಸ್ಯ 1878ನೇ ಇಸವಿ ಫಾರೆಸ್ಟ್ ರೂಲ್ಸ್ 37ನೇ ಸೆಕ್ಷನ್ ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಶಿವಮೊಗ್ಗಾ ಡಿಸ್ಟ್ರಿಕ್ಟ್ ಶಿವಮೊಗ್ಗಾ ತಾಲ್ಲೂಕು ಹೆಂಕಿಪುರದ ಟ್ರಾವೆಲರ್ಸ್ ಬಂಗ್ಲೆ ಬಳಿ ಭದ್ರಾನದಿಯಲ್ಲಿ ಈ ಕೆಳಗೆ ನಮೂದಿಸಿರುವ ನಾಟೂ ತೇಲಿಬಂದು ಸಿಕ್ಕಿ ಇರುತ್ತೆ.

ಮೇಲ್ಕಂಡ ನಾಟುಕ್ಕೆ ಹಕ್ಕು ವುಳ್ಳವರು ಈಸ್ತಿಹಾರ್ ತಾರೀಖು ಲಾಗಾಯತು ಎರಡು ತಿಂಗಳ ವಳಗಾಗಿ ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯೂಟಿ ಕ್ಷರ್‌ವೇಟರವರ ರೂಬರೂ ಖುದ್ದಾಗಿ ಆಗಲಿ ಅಥವಾ ಕ್ರಮುವಾಗಿ ಅಧಿಕಾರ ಪಡೆದ ಮುಖ್ತಾರೀಕನ ಮೂಲಕವಾಗಲಿ ಹಾಜರಾಗಿ ತಮ್ಮ ಹಕ್ಕನ್ನು ಸ್ಥಿರಪಡಿಸಿಕೊಳ್ಳಬೇಕು. ಆ ತಾರೀಖು ನಂತರ ಬರುವ ಹಕ್ಕುದಾರಿಯನ್ನು ಅಂಗೀಕರಿಸದೆ ಸರಕಾರದ ತರಫ್ ಸದರೀ ನಾಟುವನ್ನು ಹರಾಜು ಮಾಡಲ್ಪಡುವದು.

ನಾಟು ತಪಸೀಲ್.

ನಂಬರ್.	ಜಾತಿ.	ಉದ್ದ ಲಾಂಬಿ ಅಡಿ.	ಸುತ್ತಳತೆ ಅಡಿ.	ಷರಾ.
1	ಸಾಗುವಾನಿ ನಾಟು ..	14 ಅಡಿ, 4 ಅಂಗುಲ	7 ಅಡಿ, 8 ಅಂಗುಲ	

ಸಿ. ನಾರಾಯಣರಾವ್,
ಡೆಪ್ಯೂಟಿ ಕ್ಷರ್‌ವೇಟರ್.